## ಬಿನ್ನಹಕೆ ಬಾಯಿಲ್ಲವಯ್ಯ

**ಬಿ.ಆರ್. ಲಕ್ಷ್ಮಣರಾವ್** ಅವರ ಕವಿತೆಗಳಷ್ಟೇ ಗದ್ಯವೂ ಸೊಗಸು ಎನ್ನುವುದಕ್ಕೆ ನಿದರ್ಶನದಂತಿದೆ 'ಬಿನ್ನಹಕ್ಕೆ ಬಾಯಿಲ್ಲವಯ್ಯ' ಕೃತಿ. ಇಲ್ಲಿನ ಗದ್ಯ ಹಲವು ಬಗೆಗಳಲ್ಲಿ ಪ್ರಕಟಗೊಂಡಿದೆ. ವಿಚಾರ, ವಿನೋದ, ವಿಮರ್ಶೆ ಹಾಗೂ ವ್ಯಕ್ತಿಚಿತ್ರಗಳು ಎನ್ನುವ ನಾಲ್ಕು ಭಾಗಗಳಲ್ಲಿ ವಿಂಗಡಿಸಿಕೊಂಡಿರುವ ಗದ್ಯಬರಹಗಳು, ಓದುಗರಿಗೆ ಅಷ್ಟೇನೂ ಪರಿಚಿತವಲ್ಲದ ಬಿಆರ್‌ಎಲ್ ಅವರ ಮುಖವೊಂದನ್ನು ಪರಿಚಯಿಸುವಂತಿದೆ. ಈ ಬರಹಗಳು ಕವಿಯ ವೈಚಾರಿಕ-ವಿಮರ್ಶಕ ಮನೋಧರ್ಮವನ್ನು ಕಾಣಿಸುವಂತಿದೆ.




'ಅಂತರಂಗದ ಬೆಳಕಿಗಾಗಿ ಒಳ್ಳೆಯತನ' ಎನ್ನುವ ಬರಹವನ್ನು ಬಿಆರ್‌ಎಲ್ ಅವರ ಸಾಹಿತ್ಯದ ತಾತ್ವಿಕತೆಯ ರೂಪದಲ್ಲಿ ಗಮನಿಸಬಹುದು. ನಾವು ಯಾರಿಗಾಗಿ, ಯಾಕಾಗಿ ಪ್ರಾಮಾಣಿಕರಾಗಿರಬೇಕು? ನೀತಿವಂತರೂ, ಹೃದಯವಂತರೂ, ಸತ್ಯಸಂಧರೂ ಯಾಕಾಗಿರಬೇಕು? ಎನ್ನುವ ಪ್ರಶ್ನೆಗಳಿಗೆ ಉತ್ತರಿಸುವ ಪ್ರಯತ್ನದ ಈ ಬರಹ, 'ನಾವು ಒಳ್ಳೆಯವರಾಗಬೇಕಾದ್ದು ಮುಖ್ಯವಾಗಿ ನಮ್ಮ ಒಳಿತಿಗಾಗಿಯೇ. ನಮ್ಮ ಅಂತರಾತ್ಮಕ್ಕೆ ಒಮ್ಮೆ ನಿಷ್ಠರಾದೆವು ಅಂದರೆ ಆಮೇಲೆ ಬೇರೆಯವರ ಪಾಲಿಗೆ ಎಂದಿಗೂ ಅಪ್ರಾಮಾಣಿಕರಾಗಲು ಸಾಧ್ಯವಿಲ್ಲ' ಎನ್ನುವ ನಿಲುವು ತಲುಪುತ್ತದೆ. ಸಹೃದಯನ ಒಳಗನ್ನು ತಿಳಿಯಾಗಿಸುವ ಸಾಹಿತ್ಯದ ಉದ್ದೇಶ ಈ ಬರಹದಲ್ಲಿ ಸೊಗಸಾಗಿ ಮೂಡಿದೆ.

ವಿಮರ್ಶೆ ಹಾಗೂ ವ್ಯಕ್ತಿಚಿತ್ರ ವಿಭಾಗದಲ್ಲಿನ ಬರಹಗಳು ಲೇಖಕರ ಓದಿನ ಬೀಸು ಹಾಗೂ ಒಟನಾಟದ ಸೊಗಸನ್ನು ಸೂಚಿಸುವಂತಿವೆ. ನಿಸಾರ್ ಅಹಮದ್ ಅವರ ಪ್ರೇಮಕಾವ್ಯ ಹಾಗೂ ಲಂಕೇಶ್ ಕಾವ್ಯದಂಥ ಬರಹಗಳು ತಮ್ಮ ಒಳನೋಟಗಳಿಂದ ಗಮನಸೆಳೆಯುತ್ತವೆ. ನರಸಿಂಹಸ್ವಾಮಿ, ನರಹಳ್ಳಿ ಬಾಲಸುಬ್ರಹ್ಮಣ್ಯ, ಬಿ.ಕೆ. ಸುಮಿತ್ರ ಸೇರಿದಂತೆ ಹಲವರ ಕುರಿತ ಆಪ್ತ ಬರಹಗಳು ಸಾಂಸ್ಕೃತಿಕ ಚರಿತ್ರೆಯ ತುಣುಕುಗಳಂತೆಯೂ ಇವೆ.

**ಲೇ: ಬಿ.ಆರ್. ಲಕ್ಷ್ಮಣರಾವ್; ಪು: 412; ಬೆ: ₹ 450; ಪ್ರ: ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು. ಫೋನ್: 9845693614**

---

## ಭವದ ಅಗುಳಿ




**ಶಿಕ್ಷಣ** ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಂತೋಷ ಅಂಗಡಿ, ರಂಗಭೂಮಿಯಲ್ಲೂ ಆಸಕ್ತರು, ಪ್ರಯೋಗನಿರತರು. ಸಂಗೀತ, ಚಿತ್ರಕಲೆ, ಛಾಯಾಗ್ರಹಣದಲ್ಲಿ ಪ್ರೀತಿಯುಳ್ಳವರು. ಹಲವು ಕ್ಷೇತ್ರಗಳ ಈ ಪರಿಚಯ ಹಾಗೂ ಆಸಕ್ತಿ ಅವರ ಕವಿತೆಗಳಿಗೆ ವಿಶಿಷ್ಟ ಲವಲವಿಕೆ ತಂದುಕೊಟ್ಟಿದೆ. ಚೊಚ್ಚಿಲ ಸಂಕಲನದಲ್ಲಿಯೇ ಸಂತೋಷರ ಕಾವ್ಯದ ಪಿಸುಮಾತು ಓದುಗರಿಗೆ ಕೇಳಿಸುವಷ್ಟು ಸ್ಪಷ್ಟವಾಗಿದೆ.

'ನೆಲದ ತುಂಬಾ ಬೆಳದಿಂಗಳ ಹಾಸು' ಕವಿತೆಯ, 'ಓ ದೇವರೆ ಕರುಣಿಸು/ ನೆಲದ ತುಂಬಾ ಬೆಳದಿಂಗಳ ಹಾಸು/ ಜೀವ ಕಾರುಣ್ಯದ ಚುಕ್ಕಿಗಳ ಕೂಡಿಸಿ/ ರಂಗೋಲಿ ಬರೆಯುತ್ತೇನೆ' ಎನ್ನುವ ಸಾಲುಗಳು ಕವಿಯ ಉದ್ದೇಶವನ್ನು ಸ್ಪಷ್ಟಪಡಿಸುವಂತಿವೆ. 'ಬಾ ನೀನು ಮಳೆಯಂತೆ' ಎನ್ನುವ ನಿರೀಕ್ಷೆ, ನರನಾಡಿಯ ತುಂಬ ಪ್ರೇಮದ ರಸ ತುಂಬಲೆಂಬ ಹಂಬಲ ಹಾಗೂ 'ಅಪ್ಪನ/ ಮೈತುಂಬಾ/ ಬೆವರಿನ ಜಳಕ/ ಕಣ್ಣುಗಳಲಿ/ ಬದುಕಿನ ಫಸಲು' ಎನ್ನುವ ಅರಿವು ಜೊತೆಜೊತೆಗೆ ನಡೆಯುತ್ತವೆ.

ಎಲ್ಲಿಂದಲೋ ಹಾರಿಬರುವ ನವಿಲುಗರಿ ಶ್ರೀಕೃಷ್ಣನ ಹಾಗೂ ಅಕ್ಕನ ನೆನಪುಗಳನ್ನು ಕವಿಯ ಮನಸ್ಸಿನೊಳಗೆ ಭೋರ್ಗರೆಯುವಂತೆ ಮಾಡುತ್ತದೆ. ನವಿಲುಗರಿಯ ನವುರು ನಡಿಗೆಯ ಹಿಂದಿರಬಹುದಾದ ಘನ ದರ್ಶನವನ್ನು ಕಾಣಿಸಲು ಕವಿತೆ ಹಂಬಲಿಸುತ್ತದೆ. ಈ ಹಂಬಲ ಹಲವು ಕವಿತೆಗಳಲ್ಲಿ ಮತ್ತೆ ಮತ್ತೆ ಕಾಣಿಸುವುದರಿಂದಲೇ, ಸಂತೋಷ ಅಂಗಡಿಯವರ ಕಾವ್ಯ ಆಪ್ತವೆನ್ನಿಸುತ್ತದೆ.

**ಲೇ: ಸಂತೋಷ ಅಂಗಡಿ; ಪು: 92, ಬೆ: ₹ 125; ಪ್ರ: ಅನ್ವೇಷಣೆ ಪ್ರಕಾಶನ, ಬೆಂಗಳೂರು. ಫೋನ್: 9900566020**